**ಸಾಕ್ಷಿಯನ್ನು ದಿಃ17.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದಃ</u>**

1. ಈ ದಾವೆಯನ್ನು ಶ್ರೀನಿವಾಸ ರವರು ಕಾಳಮ್ಮ ನವರ ಮೇಲೆ ಹಾಕಿದ್ದಾರೆ. ಬೇರೆ ಯಾರ ಮೇಲೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಾದಿಯು ಕೊಟ್ಟ ಮಾಹಿತಿ ಆಧಾರದ ಮೇಲೆ ತಯಾರು ಮಾಡಿಸಿದ್ದೀರಾ ಎಂದರೆ ಹೌದು.

3. ವಾದಿಯು ಯಾವ ಚಕ್ಕುಬಂದಿಗೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ ಎಂದರೆ, ಪೂರ್ವಕ್ಕೆಃಬೆಟ್ಟದಪುರ ಪಿರಿಯಾಪಟ್ಟ ರಸ್ತೆ, ಪಶ್ಚಿಮಕ್ಕೆಃ ಪರಮೇಶ್ವರ ದೇವರ ಜಮೀನು, ಉತ್ತರಕ್ಕೆಃ ಹಿಟ್ನಹಳ್ಳಿ ಕಾಲೋನಿಯವರ ಜಮೀನು ಹಾಗೂ ದಕ್ಷಿಣಕ್ಕೆ ಪುಟ್ಟಮ್ಮನ ಜಮೀನು. ಸ.ನಂ.50 ಕ್ಕೆ ದಾವೆ ಹಾಕಿದ್ದಾರೆ.

4. ಸ.ನಂ.50 ರಲ್ಲಿ ಎಷ್ಟು ಪೋಡು ಆಗಿದೆ ಎಂದು ನನಗೆ ಗೊತ್ತಿಲ್ಲ. 30 ವರೆ ಗುಂಟೆ ಇದೆ.

5. ದಾಸೇಗೌಡ ನಿಮಗೆ ಗೊತ್ತಾ ಎಂದರೆ ಗೊತ್ತಿಲ್ಲ.

6. ದಾಸೇಗೌಡರಿಗೆ ಎಷ್ಟು ಜನ ಮಕ್ಕಳು ಎಂದರೆ, ಇಬ್ಬರು ಎಂದು ಹೇಳುತ್ತಾರೆ ನನಗೆ ಗೊತ್ತಿಲ್ಲ. ಆ ರೀತಿ ಶ್ರೀನಿವಾಸ ರವರ ತಂದೆ ತಿಮ್ಮಪ್ಪ ಹೇಳಿದ್ದರು.

7. ಗಂಗಮಾಳಮ್ಮನಿಗೆ ಹಾಗೂ ದಾಸೇಗೌಡರಿಗೆ ಏನು ಸಂಬಂಧ ಎಂದರೆ ತಿಮ್ಮಪ್ಪನ ಪತ್ನಿ ಗಂಗಮಾಳಮ್ಮ. ದಾಸೇಗೌಡರಿಗೆ ಸೊಸೆ ಆಗಬೇಕು.

8. ಸ.ನಂ.50 ಎರಡು ಪೋಡು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕಾಳಮ್ಮನ ಪತಿ ಲಕ್ಕಯ್ಯ ನನಗೆ ಗೊತ್ತು. ಲಕ್ಕಯ್ಯನ ತಂದೆ ಹೆಸರು ಕಾಳ ಎಂದರೆ ಸರಿ. ಸದರಿ ಕಾಳ ತಂದೆ ಹೆಸರು ದಾಸ ಎಂದರೆ, ಗೊತ್ತಿಲ್ಲ. ಲಕ್ಕಯ್ಯನ ತಂದೆಯನ್ನು ಅಂಚೆ ಕಾಳಪ್ಪ ಎಂದು ಕರೆಯುತ್ತಿದ್ದರು.

9. ಸ.ನಂ.50 ರಲ್ಲಿ 2 ಎಕರೆ 2 ಗುಂಟೆ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ.

10. ಸದರಿ 2 ಎಕರೆ 2 ಗುಂಟೆ ಈಗ ಪ್ರತಿವಾದಿಗಳ ಸ್ವಾಧೀನ ಮತ್ತು ಮಾಲೀಕತ್ವದಲ್ಲಿ ಇದೆ ಎಂದರೆ ಗೊತ್ತಿಲ್ಲ, ಆದರೆ ಅವರೂ ಸಹ ಉಳುಮೆ ಮಾಡುತ್ತಾರೆ. ಅವರು 2 ಎಕರೆ 2 ಗುಂಟೆ ಮಾಡುತ್ತಾರೆ ಎಂದರೆ ಎಷ್ಟು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

11. ದಾವಾ ಜಮೀನಿನ ಅಕ್ಕಪಕ್ಕ ಹೊಂದಕೊಂತೆ ನಿಮಗೆ ಜಮೀನು ಇದೆಯಾ ಎಂದರೆ, ಪೂರ್ವಕ್ಕೆ ಇರುವ ರಸ್ತೆ ಆಚೆ ನಮಗೆ ಸ.ನಂ.44 ಹಾಗೂ 45 ರಲ್ಲಿ ಇದೆ.

12. ದಾವಾ ಸ್ವತ್ತು ಮೂಲತಃ ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ದಾವಾ ಸ್ವತ್ತಿನಲ್ಲಿ 2 ಎಕರೆ 2 ಗುಂಟೆಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದರೂ ಗೊತ್ತಿಲ್ಲ ಎಂದು ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ